O.S.2/2017
P.W.2

**ಸಾಕ್ಷಿದಾರರನ್ನುಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 12-01-2018.**

ಪಾಟೀ ಸವಾಲು ಶ್ರೀ ಕೆ.ಜೆ.ಡಿ. ಪ್ರತಿವಾದಿ ಪರ **ವಕೀಲರಿಂದ** ಃ

ನಾನು ದಿಂಡಗೂರಿನಲ್ಲಿ ವಾಸವಾಗಿದ್ದೇನೆ. ನಮ್ಮ ಊರಿನಿಂದ ಚನ್ನರಾಯಪಟ್ಟಣಕ್ಕೆ 6 ಕಿ.ಮೀ ಅಂತರ ಇದೆ. ಪ್ರತಿವಾದಿ ನಲ್ಲೂರುನಲ್ಲಿ ವಾಸವಾಗಿದ್ದಾರೆ. ನಲ್ಲೂರಿನಿಂದ ಚನ್ನರಾಯಪಟ್ಟಣ ಸುಮಾರು 5-6 ಕಿ.ಮೀ ಅಂತರ ಇದೆ. ನಾನು, ವಾದಿಯ ಗಂಡ ಹಾಗೂ ಪ್ರತಿವಾದಿಯ ಹೆಂಡತಿ ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಬಿಕ್ಲಂದಾರ ನಂಜುಂಡಸ್ವಾಮಿ ನಮ್ಮ ಊರಿನವರು.

ಪ್ರತಿವಾದಿಗೆ ತಮ್ಮ ಊರಿನಲ್ಲಿ ಜಮೀನು ಮತ್ತು ಮನೆ ಇದೆ ಎಂದರೆ ಸರಿ. ವಾದಿಯನ್ನು ಹೊರತುಪಡಿಸಿ ಪ್ರತಿವಾದಿ ಯಾರ ಬಳಿ ಸಾಲ ಮಾಡಿದ್ದರು ಎಂದರೆ ಗೊತ್ತಿಲ್ಲ. ಮಾತುಕತೆಯು ದಿನಾಂಕಃ04.12.2013 ರಲ್ಲಿ ವಾದಿಯ ಮನೆಯಲಿಪ್ಲಿ ಆಗಿರುತ್ತದೆ. ವಾರ ಗೊತ್ತಿಲ್ಲ. ದಿನಾನಂಕಃ04.12.2013 ರಂದು 50 ಸಾವಿರ ರೂಪಾಯಿಗಳನ್ನು ವಾದಿ ತಮ್ಮ ಮನೆಯಲ್ಲಿ ನೀಡಿರುತ್ತಾರೆ. ಆಗ ನಾನು ಮತ್ತು ಪುಟ್ಟೇಗೌಡ ಹಾಜರಿದ್ದೆವು. ನಾನು ದಿಂಡಗೂರು ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಪುಟ್ಟೇಗೌಡ ರವರು ಮತ್ತಿಗಟ್ಟ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ದಿನಾಂಕಃ 02.01.2014 ರ ವಾರ ಗೊತ್ತಿಲ್ಲ. 2013-14 ನೇ ಸಾಲಿನಲ್ಲಿ ನಮ್ಮ ಕಛೇರಿಯ ಸಮಯ ಬೆಳಿಗ್ಗೆ 09 ರಿಂದ 12.30 ರವರೆಗೆ ಸಂಜೆ 03 ರಿಂದ 6 ರವರೆಗೆ ಇತ್ತು. ನಾನು ನಮ್ಮ ಕಛೇರಿಯಲ್ಲಿ ಸಹಿ ಹಾಕುತ್ತೇನೆ.

ಕರಾರು ಪತ್ರವನ್ನು ಪ್ರತಿವಾದಿ ತಂದಿದ್ದರು. ಸದರಿ ಪತ್ರವನ್ನು ತರಲು ಹಣವನ್ನು ಪ್ರತಿವಾದಿ ಹಾಕಿದ್ದರು. ಸದರಿ ಪತ್ರವನು ದಿನಾಂಕಃ04.12.2013 ರಂದು ತಂದಿರುತ್ತಾರೆ. ಹಣ ಕೊಟ್ಟಾಗ ಸಮಯ ಮದ್ಯಾಹ್ನ 01.00 ರಿಂದ 01.30 ಆಗಿತ್ತು. ಉಳಿದ ಹಣವನು ಪತ್ರ ಬರೆಸಿಕೊಂಡು ದಿನಾಂಕಃ02.01.2014 ರಂದು ಮದ್ಯಾಹ್ನ 02.30 ರ ಸಮಯದಲ್ಲಿ ನೀಡಿರುತ್ತಾರೆ. ನೋಟುಗಳು ಸಾವಿರ ಐದುನೂರುಗಳ ನೋಟುಗಳನ್ನು ನೀಡಿರುತ್ತಾರೆ. ಆದರೆ ಎಷ್ಟು ಎಷ್ಟು ನೀಡಿದ್ದಾರೆ ಎಂದು ಹೇಳಲು ಆಗುವುದಿಲ್ಲ. ದಿನಾಂಕಃ02.01.2014 ರಂದು ಸಾವಿರ ಐದುನೂರು ಹಾಗೂ ನೂರು ರೂಪಾಯಿಗಳನ್ನು ನೀಡಿರುತ್ತಾರೆ. ಹಣ ಕೊಡುವ ಕಾಲಕ್ಕೆ ಪ್ರತಿವಾದಿ ಹಾಗೂ ಆತನ ಹೆಂಡತಿ ಹಾಗೂ ಸಾಕ್ಷಿದಾರರು ವಾದಿ ಮತ್ತು ವಾದಿಯ ಗಂಡ ಹಾಜರಿದ್ದರು.

ವಾದಿಯ ಗಂಡನಿಗೆ ಸುಮಾರು 20 ಸಾವಿರಗಳ ಮೇಲ್ಪಟ್ಟು ಸಂಬಳ ಬರುತ್ತದೆ. ಪತ್ರವನ್ನು 2 ಗಂಟೆಗೆ ಪ್ರಾರಂಭಿಸಿ 02.30ಕ್ಕೆ ಬರೆದು ಮುಗಿಸಿರುತ್ತಾರೆ. ಸದರಿ ಪತ್ರವನ್ನು ನಂಜುಂಡಸ್ವಾಮಿ ಬರೆದಿರುತ್ತಾರೆ. ನಿಶಾನೆ ಪಿ-1 ರಲ್ಲಿ ರೂ.1,30,000/- ಎಂಬಲ್ಲಿ 3 ನ್ನು ತಿದ್ದುಪಡಿಯಾಗಿದೆ ಎಂದರೆ ಸರಿ. ನಿಶಾನೆ ಪಿ-1 ರಲ್ಲಿರುವ ಸಹಿ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1ನ್ನು ಬೆರಳಚ್ಚು ಮಾಡಿದವರ ಹೆಸರು ಗೊತ್ತಿಲ್ಲ. ನಾನು, ವಾದಿಯ ಗಂಡ, ಪುಟ್ಟೇಗೌಡ ರವರು ವಿಶ್ವಾಸದಿಂದ ಇದ್ದೇವೆ ಎಂದರೆ ಸಾಕ್ಷಿಯ

ಪ್ರತಿವಾದಿಯ ಜೊತೆಯಲ್ಲ ಸಹ ವಿಶ್ವಾಸದಿಂದ ಇದ್ದೇವೆ ಎಂದು ನುಡಿಯತ್ತಾರೆ. ಪ್ರತಿವಾದಿ ರೂ.1,30,000/- ಸಾಲ ಪಡೆದಿಲ್ಲ ಹಾಗೂ 2 ರೂಪಾಯಿ ಬಡ್ಡಿ ನೀಡುವಂತೆ ಒಪ್ಪಿಲ್ಲ ಎಂದರೆ ಸರಿಯಲ್ಲ. ವಾದಿಗೆ ಪ್ರತಿವಾದಿ ಯಾರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ನಿಶಾನೆ ಪಿ-1 ನು ಸೃಷ್ಟಿ ಮಾಡಿದ್ದೆವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.ಸ.ಮಾ,

*(ಎಸ್.ಚೆನ್ನಸ್ವಾಮಿ)*
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ**